ಶ್ರೀ ಸಿದ್ದರಾಮಯ್ಯ : ಅದು ಯಾವುದಾದರೂ ಇದ್ದರೆ ಹೇಳಿ, ಅದನ್ನು ಕೊಡುತ್ತೇವೆ ಯಾವುದನ್ನು ಉಳಿಸುವುದಿಲ್ಲ. ಅದೇ ನಾನು ಹೇಳಿದೆನಲ್ಲಾ ಕ್ಲೈಂ ಮಾಡುವುದಕ್ಕೆ 90 ದಿನ ಇದೆ ಎಂದು, ನಿಶ್ಚಿತವಾಗಿ ಯಾವುದು ಇದೆ ಎಂದು ಹೇಳಿ, ಅದನ್ನು ಕೊಡಿಸುತ್ತೇವೆ.

ಕೆ.ಎಸ್.ಆರ್.ಟಿ.ಸಿ. ಯಿಂದ ನಂದಿ ಬೆಟ್ಟದಲ್ಲಿ ಕೊಠಡಿಗಳ ನಿರ್ಮಾಣ

191 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂದಿಬೆಟ್ಟದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಯಾವುದಾದರೂ ಉಪಹಾರ ಗೃಹ ಮತ್ತು ಹೋಟೆಲ್‌ನ್ನು ನಡೆಸುತ್ತಿದೆಯೇ?

ಆ) ಇದ್ದರೆ, ಅಲ್ಲಿ ಎಷ್ಟು ಕೊಠಡಿಗಳಿವೆ?

ಇ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ನಂದಿಬೆಟ್ಟದಲ್ಲಿ ಹೊಸ ಹೋಟೆಲ್‌ನ್ನು ಕಟ್ಟುವ ಯೋಜನೆ ಅಥವಾ ಕೆಲವು ಕೊಠಡಿಗಳನ್ನು ಕಟ್ಟುವ ಯೋಜನೆ ಇದೆಯೇ?

ಈ) ಹಾಗಿದ್ದರೆ ಯೋಜನೆಯ ವಿವರಗಳೇನು?

ಉ) ಈಗಿರುವ ಉಪಹಾರ ಗೃಹವನ್ನು ಸುಧಾರಿಸುವ ಯೋಜನೆಯನ್ನು ಸರ್ಕಾರದ ಗಮನಕ್ಕೆ ತರಲಾಗಿದೆಯೆ?

ಊ) ಹಾಗಿದ್ದರೆ ಈ ಯೋಜನೆಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಹೌದು.

ಆ) ಶೌಚಾಗೃಹ ಹೊಂದಿರುವ ಎರಡು ಜೋಡಿ ಕೊಠಡಿಗಳು.

ಇ) ಈಗ ಇರುವ ಸಮ್ಮೇಳನ ಭವನವನ್ನು ನಾಲ್ಕು ಜೋಡಿ ಕೊಠಡಿಗಳನ್ನಾಗಿ ರೂ. 3 ಲಕ್ಷ 10 ಸಾವಿರ ವೆಚ್ಚದಲ್ಲಿ ಪರಿವರ್ತಿಸುವ ಯೋಜನೆ ಇದೆ.

ಈ) ಕರ್ನಾಟಕ ಭೂ ಸೇನಾ ನಿಗಮವು ಈಗಾಗಲೇ ಈ ಕಾಮಗಾರಿ ಕೆಲಸಕ್ಕೆ ರೂ. 3 ಲಕ್ಷ 10 ಸಾವಿರಗಳ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ಇದು ಪರಿಶೀಲನೆಯಲ್ಲಿದೆ.

ಉ) ಹೌದು.

ಊ) ಈ ಉಪಹಾರಗೃಹದಲ್ಲಿ ಹೊಸ ಪೀಠೋಪಕರಣಗಳನ್ನು ಒದಗಿಸುವ ಹಾಗೂ ಪರಿಸರಕ್ಕೆ ಹೊಂದುವ ಹಾಗೆ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಶ್ರೀ ಎನ್. ರಾಜಣ್ಣ : ಈಗ ಇರುವ ಸಮ್ಮೇಳನ ಭವನ, ನಾಲ್ಕು ಜೋಡಿ ಕೊಠಡಿಗಳನ್ನು ಮೂರು ಲಕ್ಷ ಹತ್ತು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಪರಿವರ್ತಿಸುವ ಯೋಜನೆ ಇದೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ ಪ್ರವಾಸಿಗರು ಬಹಳ ಜನ ದಿನೇ ದಿನೇ ಜಾಸ್ತಿ ಆಗುತ್ತಾ ಇರುವುದರಿಂದ ತೊಂದರೆ ಆಗುತ್ತಾ ಇದೆ. ಆದಕೋಸ್ಕರ ನಾಲ್ಕು ಕೊಠಡಿಗಳ ಜೊತೆ ಇನ್ನು ಒಂದು 6 ಜಾಸ್ತಿ ಮಾಡಿ ಕಟ್ಟಿ, ಏಕೆಂದರೆ ನಂದಿ ಬೆಟ್ಟ ಬೆಂಗಳೂರಿಗೆ ಬಹಳ ಹತ್ತಿರ ಇರುವುದರಿಂದ ಅನಾನುಕೂಲ ಆಗುತ್ತದೆ ಎಂದು ಹೇಳಿ ತಮ್ಮಲ್ಲಿ ಮನವಿ ಜನ ಜಾಸ್ತಿ ಬರುತ್ತಾರೆ. ಆದ್ದರಿಂದ ಅವರಿಗೆ ಇದರಿಂದ ಅನುಕೂಲ ಆಗುತ್ತದೆ ಏಂದು ಹೇಳಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ ಇಲ್ಲಿ ಕೆ.ಎಸ್.ಟಿ.ಡಿ.ಸಿ ಅವರು ಇಲ್ಲಿಗೆ ಜನ ಜಾಸ್ತಿ ಭಾನುವಾರ ಮತ್ತು ರಜಾ ದಿನಗಳಲ್ಲಿ ಹೋಗುವದರಿಂದ ಅಲ್ಲಿ ಇನ್‌ಫರ್‌ಮೇಷನ್ ಸೆಂಟರ್ ಇಲ್ಲ, ಆದ್ದರಿಂದ ಅಲ್ಲಿ ಇನ್‌ಫರ್‌ಮೇಶನ್ ಸೆಂಟರ್ ಓಪನ್ ಮಾಡುವುದಕ್ಕೆ ಆಗುತ್ತದೆಯೆ ಎಂದು ತಮ್ಮಲ್ಲಿ ಮನವಿ.

4.10. ಪಿ.ಎಂ.

ಮೂರನೆಯದಾಗಿ, ರಜಾ ದಿನಗಳಲ್ಲಿ ಜನ ತುಂಬಾ ಇರುವುದರಿಂದ ಅಲ್ಲಿ ಮೊಬೈಲ್ ರೆಸ್ಟೋರೆಂಟ್ ಮಾಡಬೇಕೆಂದು ನನ್ನ ಸಲಹೆ. ನಾಲ್ಕನೆಯದಾಗಿ, amusement park for children ಮಾಡಬೇಕೆಂದು ತಮ್ಮಲ್ಲಿ ಮನವಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ರಾಜಣ್ಣನವರು ನಂದಿ ಬೆಟ್ಟ ಬಹಳ ಪ್ರಮುಖವಾಗಿರತಕ್ಕದ್ದು, ಅಲ್ಲಿಗೆ ಬಹಳ ಜನ ಹೋಗುತ್ತಾರೆಂದು ಹೇಳಿದ್ದಾರೆ. ಇದೆಲ್ಲಾ ನಿಜ. ಶನಿವಾರ, ಭಾನುವಾರ ಬಹಳ ಜನ ಬೆಟ್ಟದ ಮೇಲೆ ಹೋಗಿ ಬೆಟ್ಟದಲ್ಲಿದ್ದು ಸುಮಾರು ಸಮಯ ಕಳೆಯುತ್ತಾರೆ. ಆದರೆ ಇವತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರತಕ್ಕದ್ದು ಎರಡು ಡಬಲ್ ರೂಂ ಮಾತ್ರ. ಈಗಿರತಕ್ಕ ಸಮ್ಮೇಳನ ಭವನವನ್ನು ಕೊಠಡಿಗಳಾಗಿ ಪರಿವರ್ತನೆ ಮಾಡಬೇಕೆಂದು ಕೇಳುತ್ತಿದ್ದಾರೆ. ಅಲ್ಲಿ ಜಾಗ ಇದೆ, ಜಮೀನು ಇಲ್ಲ. ಇದನ್ನು ವಿಸ್ತರಣೆ ಮಾಡಬೇಕೆಂದು ಹೇಳತಕ್ಕದ್ದು ನಮ್ಮ ಚಿಂತನೆ ಇದೆ. ಆದರೆ ಈ ಕೊಠಡಿ ಕಟ್ಟುವುದಕ್ಕೆ ಜಮೀನಿಲ್ಲ. ಕಾರಣ ಅಲ್ಲಿ ತೋಟಗಾರಿಕೆ ಇಲಾಖೆಯವರಿಗೆ ಸೇರಿದ 16 ಕೊಠಡಿಗಳು ಒಂದು ಕಟ್ಟಡ ಇದೆ. ಅದು ಅವರ ಕಂಟ್ರೋಲ್‌ನಲ್ಲಿದೆ. ಡಿಪಿಆರ್‌ಗೆ ಸಂಬಂಧಪಟ್ಟಂತೆ ಎರಡು ಸುಸಜ್ಜಿತವಾದ ಕೊಠಡಿಗಳು ಮತ್ತು ಸಮ್ಮೇಳನ ಸಭಾಂಗಣ ಇದೆ. ಅದು ಅವರ ಕಂಟ್ರೋಲ್‌ನಲ್ಲಿದೆ. ಅಲ್ಲಿ ಇದನ್ನು ವಿಸ್ತಾರ ಮಾಡಬೇಕೆಂದರೆ ಜಾಗ ಇಲ್ಲ, ಬೇರೆ ಸ್ಥಳ ಇಲ್ಲ. ಸ್ಥಳ ಇಲ್ಲ. ಸ್ಥಳ ಇದ್ದರೆ ಕಟ್ಟಬೇಕೆಂದು ಹೇಳಿದ್ದೀರಿ ಮತ್ತು ವಾರ್ತಾ ಕೇಂದ್ರವನ್ನು ಮಾಡಬೇಕೆಂದು ಹೇಳಿದ್ದೀರಿ. ನಾನು ಆ ಇಲಾಖೆಯ ಮಂತ್ರಿಯಾಗಿದ್ದೇನೆ. ನಂದಿಬೆಟ್ಟಕ್ಕೆ ವಾರ್ತಾ ಕೇಂದ್ರ ಬೇಕಾಗಿಲ್ಲ. ಅಲ್ಲಿ ಹೋಗತಕ್ಕ ಪ್ರವಾಸಿಗರು ಸಂಜೆಯವರೆಗೆ ಸಮಯ ಕಳೆದು ರಾತ್ರಿ ಹೊತ್ತಿನಲ್ಲಿ ಹಿಂದಕ್ಕೆ ಬರುತ್ತಾರೆ. ಆದ್ದರಿಂದ ಅಲ್ಲಿ ವಾರ್ತಾ ಕೇಂದ್ರದ ಅಗತ್ಯ ಕಾಣುವುದಿಲ್ಲ. ಅಲ್ಲಿ ಕೆಳಭಾಗದಲ್ಲಿ ಒಂದು ಪಾರ್ಕ್ ಇದೆ. ಅದು ತೋಟಗಾರಿಕೆ ಇಲಾಖೆಯವರ ಕಂಟ್ರೋಲ್‌ನಲ್ಲಿದೆ. ಅವರ ಜೊತೆಯಲ್ಲಿ ನಾವು ಚರ್ಚೆ ಮಾಡಿ ಆ ಪಾರ್ಕ್‌ನ್ನು ಚೆನ್ನಾಗಿಟ್ಟುಕೊಳ್ಳುವುದಕ್ಕೆ ಇರತಕ್ಕ ಕೆಲವು ಕಾರ್ಯಕ್ರಮಗಳು. ಆಮೇಲೆ ಮೊಬೈಲ್

ರೆಸ್ಟೋರೆಂಟ್ ಬಗ್ಗೆ ಹೇಳಿದಿರಿ. ಅಲ್ಲಿ ಈಗ ಒಂದು ರೆಸ್ಟೋರೆಂಟ್ ಇದೆ. ಅದನ್ನು ಕೆಎಸ್‌ಟಿಡಿಸಿ ಮೂಲಕ ನಡೆಸುತ್ತಿದ್ದಾರೆ. ಅದಕ್ಕೆ 25-26 ಲಕ್ಷ ರೂಪಾಯಿ ಒಂದು ವರ್ಷಕ್ಕೆ ಖರ್ಚಾಗುತ್ತಿದ್ದು 5-6 ಲಕ್ಷ ರೂಪಾಯಿ ಕೆಎಸ್‌ಟಿಡಿಸಿ ಗೆ ಲಾಭ ಬರುತ್ತಿದೆ. ತಾವು ಮೊಬೈಲ್ ರೆಸ್ಟೋರೆಂಟ್ ಅಂದರೆ ಹೇಗೆ? ಅಲ್ಲಿ ಇನ್ನೊಂದು ರೊಟೇಷನ್ ರೆಸ್ಟೋರೆಂಟ್ ಇದೆ. ಜನ ಹೋಗತಕ್ಕದ್ದು ನಂದಿಬೆಟ್ಟಕ್ಕೆ. ಅಲ್ಲಿ ರೆಸ್ಟೋರೆಂಟ್ ಇದೆ. ಅದು 30 ದಿನವೂ ತೆರೆದಿರುತ್ತದೆ. ಆದ್ದರಿಂದ ಅಲ್ಲಿಗೆ ಮೊಬೈಲ್ ರೆಸ್ಟೋರೆಂಟ್‌ನ ಅವಶ್ಯಕತೆ ಇದೆ ಎಂದು ಕಾಣುವುದಿಲ್ಲ. ಏಕೆಂದರೆ ಅಲ್ಲಿರತಕ್ಕ ರೆಸ್ಟೋರೆಂಟ್ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದನ್ನು ಇನ್ನೂ ಹೆಚ್ಚಾಗಿ ಕೆಲಸ ಮಾಡುವಂತೆ ಮಾಡೋಣ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ರಾಜಣ್ಣನವರ ಅಭಿಪ್ರಾಯ ಈ ರೀತಿ ಇರಬಹುದು. ರಜಾ ದಿನಗಳಲ್ಲಿ ಅಲ್ಲಿ ಹೆಚ್ಚು ಜನರು ಹೋಗುತ್ತಾರೆ. ಆದ್ದರಿಂದ ಅಲ್ಲಿ ಮೊಬೈಲ್ ರೆಸ್ಟೋರೆಂಟ್ ಮೂಲಕ ತಿಂಡಿ, ಕಾಫಿ ವಿತರಣೆ ಮಾಡತಕ್ಕ ವ್ಯವಸ್ಥೆ ಇರಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ : ನಂದಿಬೆಟ್ಟ ಎಲ್ಲಿದೆ ಎಂದು ನಮಗೆ ನಿಮಗೆ ಎಲ್ಲಾ ಗೊತ್ತಿದೆ. ನಂದಿಬೆಟ್ಟಕ್ಕೆ ಹೋಗುವುದು, ಅಲ್ಲಿಂದ ನಡೆದುಕೊಂಡು ಹೋಗಿ ಒಂದು ಜಾಗಕ್ಕೆ ತಲುಪುವುದು. ಮೊಬೈಲ್ ವ್ಯಾನ್‌ಗಳು ಬಂದರೆ ಜನರಿಗೆ ನಡೆಯಲಿಕ್ಕೆ ತೊಂದರೆಯಾಗಬಹುದು. ಆದ್ದರಿಂದ ರೆಸ್ಟೋರೆಂಟ್ ಇದ್ದ ಜಾಗಕ್ಕೆ ಅವರು ಬಂದರೆ ಒಳ್ಳೆಯದೆಂದು ಕಾಣುತ್ತದೆ. ನಾವು ನೀವು ಒಂದು ಸಾರಿ ಹೋಗಿ ನೋಡಿಕೊಂಡು ಬರೋಣ. I would like to have an inspection along with you.

ಮಡಿಕೇರಿಯಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿರುವ ಸಲಕರಣೆಗಳ ದುರಸ್ತಿ

192 - ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಉಪಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಿಕೇರಿಯಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿರುವ ತಾಂತ್ರಿಕ ಸಲಕರಣೆಗಳು ಹಲವು ವರ್ಷಗಳಿಂದ ಕೆಟ್ಟು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸದರಿ ಸಂಸ್ಥೆಯಲ್ಲಿ ಖಾಲಿ ಇರುವ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರನ್ನು ತುಂಬಲು ಸರ್ಕಾರವು ಕ್ರಮಕೈಗೊಂಡಿದೆಯೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ತರಬೇತಿ ಅಧಿಕಾರಿ ಹಾಗೂ ಸಹಾಯಕ ತರಬೇತಿ ಅಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡಿದೆ. ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಡಿ.ಎನ್. ಮಾದಪ್ಪ : ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಒಂದೇ ಒಂದು ಐ.ಟಿ.ಐ. ಇದೆ. ಮಡಿಕೇರಿಯಲ್ಲಿರತಕ್ಕ ಈ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿರತಕ್ಕ ತಾಂತ್ರಿಕ ಸಲಕರಣೆಗಳು ಬಹಳ